<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 613/2015 ಸಿಡಬ್ಲೂ : 14 ಪಿಡಬ್ಲೂಃ 9

ಪ್ರಮಾಣವಚನ ಬೋಧಿಸಲಾಯಿತು ದಿಃ 08-04-2025

ಹೆಸರು : ಪಂಚಾಕ್ಷರಿ

ತಂದೆ ಹೆಸರು : ವೀರಯ್ಯ ಸಾಲಿಮಠ

ವಯಸ್ಸು : 44 ವರ್ಷ

ಉದ್ಯೋಗ : ಪಿ.ಐ ಬೈಲಹೊಂಗಲ ಪೊಲೀಸ್ ಠಾಣೆ

ವಾಸಸ್ಥಳ : ಬೈಲಹೊಂಗಲ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 07-05-2015 ರಿಂದ 12-10-2018 ವರೆಗೆ ಆರಕ್ಷಕ ವೃತ್ತ ನಿರೀಕ್ಷಕರು ಸೇಡಂ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ದಿಃ 17-06-2015 ರಂದು ಈ ಪ್ರಕರಣದ ಕಡತವನ್ನು ಚಾ ಸಾ 13 ರವರಿಂದ ಪಡೆದುಕೊಂಡು ಪರಿಶೀಲಿಸಲಾಗಿ ಅದೇ ದಿನ ಚಾ ಸಾ 1 ರವರ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಸಾಕ್ಷಿದಾರರಾದ ಚಾ ಸಾ 4 ರಿಂದ 6 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.20-06-2015 ರಂದು ಮಾರ್ಕೇಟ್ ಯಾರ್ಡ ಪೋಲೀಸ್ ಠಾಣೆ ರಾಯಚೂರಿನಿಂದ ಈ ಪ್ರಕರಣದ ಆರೋಪಿತನಿಗೆ ದಸ್ತಗಿರಿ ಮಾಡಿರುವ ಬಗ್ಗೆ ಮತ್ತು ಮು ಮಾ ಲನ್ನು ವಶಕ್ಕೆ ಪಡೆದುಕೊಂಡಿರುವ ಬಗ್ಗೆ ಮಾಹಿತಿ ಬಂದಿದ್ದು ಆಗ ಚಾ ಸಾ 1 ರವರಿಗೆ ಚಾಸಾ 13 ರವರೊಂದಿಗೆ ರಾಯಚೂರಿಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿಯವರು ಮರಳಿ ಬಂದಾಗ ಚಾ ಸಾ 1 ರವರ ಮತ್ತೊಮ್ಮೆ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ. 21-06-2015 ರಂದು ಈ ಪ್ರಕರಣದಲ್ಲಿ ಪರಾರಿ ಇದ್ದ 04 ನೇ ಆರೋಪಿಯನ್ನು ದಸ್ತಗಿರಿ ಮಾಡಲು ನಮ್ಮ ಸಿಬ್ಬಂದಿಯವರಿಗೆ ಮೆಮೊ ನೀಡಿದ್ದೇನೆ. ಸಾಕ್ಷಿಯು ಸದರಿ ಮೆಮೋವನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿ ಪಿ 6 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು. ದಿ. 23-06-2015 ರಂದು ಚಾ ಸಾ 11 ರವರು ವರದಿಯನ್ನು ನೀಡಿದ್ದರು. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 7 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 7(ಎ) ಎಂದು ಗುರುತಿಸಲಾಯಿತು.

ಅದೇ ರೀತಿ ದಿ. 27-06-2015, 02-07-2015 ಮತ್ತು 10-07-2015 ರಂದು ನಮ್ಮ ಠಾಣೆಯ ಚಾ ಸಾ 11ಮತ್ತು 12 ರವರಿಗೆ ಮೆಮೊವನ್ನು ನೀಡಿರುತ್ತೇನೆ. ಸಾಕ್ಷಿಯು ಸದರಿ ಮೆಮೊಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ ಪಿ 8 ರಿಂದ 10 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 8(ಎ) ಯಿಂದ ನಿ ಪಿ 10(ಎ) ಎಂದು ಗುರುತಿಸಲಾಯಿತು.

ದಿ. 30-06-2015, 04-07-2015 ಹಾಗೂ 12-07-2015 ರಂದು ಚಾ ಸಾ 11 ಮತ್ತು 12 ರವರು ವರದಿಯನ್ನು ನೀಡಿರುತ್ತಾರೆ. ಸಾಕ್ಷಿಯು ಸದರಿ ವರದಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ ಪಿ 11 ರಿಂದ 13 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 11(ಎ) ಯಿಂದ 13(ಎ) ಎಂದು ಗುರುತಿಸಲಾಯಿತು.

ದಿ. 26-06-2015 ರಂದು ಈ ಪ್ರಕರಣದಲ್ಲಿ ರಾಯಚೂರು ಪೋಲೀಸ್ ಠಾಣೆಯಲ್ಲಿ ದಸ್ತ ಗಿರಿಯಾದ ಆರೋಪಿತರಿಗೆ ಮಾನ್ಯ ನ್ಯಾಯಾಲಯದ ಅನುಮತಿ ಪಡೆದುಕೊಂಡು ಪೋಲೀಸ್ ಕಸ್ಟಡಿಗೆ ಪ ಡೆದುಕೊಂಡಿದ್ದೇವೆ. ನಂತರ ಮರುದಿನ ಆರೋಪಿತರಿಗೆ ವಿಚಾರಣೆಗೆ ಒಳಪಡಿಸಿ ಸದರಿ ಆರೋಪಿತರು ತಪ್ಪು ಒಪ್ಪಿ ಕೊಂಡಿರುವುದರಿಂದ ಸದರಿಯಮ ಹೇಳಿಕೆಯನ್ನು ಪಡೆದುಕೊಂಡಿರುತೇನೆ. ಸದರಿ ಆರೋಪಿತರು ತೋರಿಸಿದಂತೆ ಅಪರಾದ ಸ್ಥಳದ ಪಂಚನಾಮೆಯನ್ನು ಪಂಚರಾದ ಚಾ ಸಾ 7 ಮತ್ತು 8 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 4 ಎಂದು ಗುರುತಿಸಲಾಗಿದೆ. ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 4(ಸಿ) ಎಂದು ಗುರುತಿಸಲಾಯಿತು. ಅದೇ ರೀತಿ ಪಂಚನಾಮೆಯ ಕಾಲಕ್ಕೆ ತೆಗೆದುಕೊಳ್ಳಲಾದ ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದೆ.

ನಂತರ ಅದೇ ದಿನ ಆರೋಪಿತರನ್ನು ಪಿರ್ಯಾದಿದಾರರಿಗೆ ಮತ್ತು ಸಾಕ್ಷಿದಾರರಿಗೆ ತೋರಿಸಿ ಅವರ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಈ ಪ್ರಕರಣದಲ್ಲಿ ಮಾರ್ಕೇಟ್ ಯಾರ್ಡ ಪೊಲೀಸ್ ಠಾಣೆ ರಾಯಚೂರಿನಿಂದ ತನಿಖಾ ದಾಖಲಾತಿಗಳನ್ನು ಪಡೆದುಕೊಂಡು ಈ ಪ್ರಕರಣದ ತನಿಖೆಗೆ ಅವಳಡಿಸಿಕೊಂಡಿರುತ್ತೇನೆ. ನಂತರ ಸದರಿ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ ಃ

ನಾನು ಆರೋಪಿತರ ಹೇಳಿಕೆಯನ್ನು ಒತ್ತಾಯ ಪೂರ್ವಕವಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಿಲ್ಲ. ಆರೋಪಿತರಿಗೆ ಹೊಡೆದು ಬಡಿದು ಒಪ್ಪಿಕೊಳ್ಳುವ ಹಾಗೆ ಮಾಡಿ ಸ್ವಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಿಲ್ಲ. ಪಂಚನಾಮೆಯ ಕಾಲಕ್ಕೆ ನಾನು ಯಾವುದೇ ವಸ್ತುವನ್ನು ವಶಕ್ಕೆ ಪಡೆದುಕೊಂಡಿಲ್ಲ. ನಾವು ಘಟನಾ ಸ್ದಳಕ್ಕೆ ಭೇಟಿ ನೀಡಿದಾಗ ಅಲ್ಲಿ ಅಂಗಡಿಯ ಶಟರ್ಗಳು ಮುರಿದಿತ್ತು. ಮುರಿದಿರುವ ಶಟರುಗಳ ಬೀಗ ಸ್ದಳದಲ್ಲಿ ಇರಲಿಲ್ಲ. ಸದರಿ ಶಟರಿನ ಯಾವ ದಿಕ್ಕಿನ ಬೀಗವನ್ನು ಮುರಿದಿತ್ತು ಎಂಬುದರ ಬಗ್ಗೆ ಪಂಚನಾಮೆಯಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿಯು ಚಾ ಸಾ 13 ರವರು ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತರನ್ನು ಪಿರ್ಯಾದುದಾರರಿಗೆ ಮತ್ತು ಸಾಕ್ಷಿದಾರರಿಗೆ ತೋರಿಸಿರುವ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿತರನ್ನು ಸಾಕ್ಷಿದಾರರು ಗುರುತಿಸಿ ಕೊಂಡಿರುವ ಬಗ್ಗೆ ಎಲ್ಲೂ ಕೂಡ ನಮೂದಿಸಿಲ್ಲ ಎಂದರೆ ಸಾಕ್ಷಿಯು ಸದರಿಯವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿದಾರರ ಹೇಳಿಕೆಯನ್ನು ಪೊಲೀಸ್ ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿ ಪಿ 4 ಕ್ಕೆ ಪಂಚರ ಸಹಿಯನ್ನು ಸ್ದಳದಲ್ಲಿಯೇ ಪಡೆದುಕೊಂಡಿರುತ್ತೇನೆ. ಆರೋಪಿತರು ಯಾವುದೇ ರೀತಿಯ ಅಪರಾಧ ಮಾಡದೇ ಇದ್ದರೂ ಸಹ ಅವರ ವಿರುದ್ದ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದೆರ ಸರಿಯಿಲ್ಲ. ರಾಯಚೂರು ಪೋಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣವು ಚಾಲ್ತಿಯಲ್ಲಿದೆಯ ಅಥವಾ ವಿಲೇವಾರಿಯಾಗಿದೆಯಾ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಆರೋಪಿತರನ್ನು ನಿರ್ದೋಷಿಗಳಾಗಿ ಬಿಡುಗಡೆ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸಾಕ್ಷಿದಾರರವರ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುವ ಬಗ್ಗೆ ಸುಳ್ಳ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. (ಆರೋಪಿತರು ಗೈರು ಹಾಜರು ಇದ್ದರು ಆರೋಪಿ ಪರ ವಕೀಲರು ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಮತ್ತು ಗುರುತು ಪರಿಚಯದ ಬಗ್ಗೆ ತಮ್ಮ ಆಕ್ಷೇಪಣೆ ಇರುವುದಿಲ್ಲ ಎಂದು ವಾದ ಮಾಂಡಿಸಿರುತ್ತಾರೆ.)

ಮರುವಿಚಾರಣೆಃ ಇಲ್ಲ
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**